58

ಶ್ರೀ ತಿಪ್ಪಣ್ಣಪ್ಪ ಕಮಕನೂರ, ಮಾನ್ಯ ವಿಧಾನ ಪರಿಷತ್ ಸದಸ್ಯರು ನಿಯಮ 330 ರ ಮೇರೆಗೆ ಮಂಡಿಸಿರುವ ಸೂಚನೆ.

ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ

ವಿಷಯ : ಕಲಬುರಗಿ ಜಿಲ್ಲೆಯ ದಾಲ್‌ಮಿಲ್‌ಗಳ ಪುನಶ್ಚೇತನದ ಕುರಿತು.

ನಿರ್ದೇಶಕರು (ಎಂ.ಎಸ್.ಎಂ.ಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ದಿನಾಂಕ 30.07.2022 ರಂದು ಕಲಬುರಗಿಯಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ದಾಲ್‌ಮಿಲ್ ಉದ್ದಿಮೆದಾರರ ಸಂಘದ ಪ್ರತಿನಿಧಿಗಳೊಂದಿಗೆ ದಾಲ್‌ಮಿಲ್‌ಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳ ಕುರಿತು ಸಭೆ ನಡೆಸಿರುತ್ತಾರೆ. ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನಲ್ಲಿ ಒಟ್ಟು 253 ದಾಲ್‌ಮಿಲ್‌ಗಳಿದ್ದು ಯಾದಗಿರಿ ಜಿಲ್ಲೆಯಲ್ಲಿ 9 ದಾಲ್‌ಮಿಲ್‌ಗಳು ಇರುತ್ತವೆ. ಇವುಗಳ ಪೈಕಿ ಕಲಬುರಗಿ ತಾಲ್ಲೂಕಿನ ಒಟ್ಟು 114 ಘಟಕಗಳು ಮತ್ತು ಯಾದಗಿರಿ ಜಿಲ್ಲೆಯ 2 ಘಟಕಗಳು ಕಾರ್ಯಸ್ಥಗಿತಗೊಂಡಿರುತ್ತವೆ ಎಂದು ತಿಳಿಸಲಾಗಿರುತ್ತದೆ.

ದಾಲ್ ಮಿಲ್‌ಗಳ ಸಂಘದ ಪ್ರತಿನಿಧಿಗಳು ಕೃಷಿ ಕೈಗಾರಿಕೆಗಳಿಗೆ ಸರಿಸಮಾನವಾಗಿ ಶೇ.4% ಬಡ್ಡಿದರದಲ್ಲಿ ದಾಲ್‌ಮಿಲ್‌ಗಳಿಗೆ ಸಾಲ ಸೌಲಭ್ಯ ಮನವಿ ಮಾಡಿರುತ್ತಾರೆ. ದಾಲ್‌ಮಿಲ್‌ಗಳು ಒಂದು ಕೋಟಿ ರೂಪಾಯಿ ಸಾಲ/ ಓವರ್‌ಡ್ರಾಫ್ಟ್ (ದುಡಿಮೆ ಬಂಡವಾಳ) ಪಡೆಯಲು ಪ್ರಸ್ತುತ ಇರುವ ರೂ.5.00 ಕೋಟಿ ವಹಿವಾಟು ನಡೆಸುವ ಷರತ್ತನ್ನು ಸಡಿಲಗೊಳಿಸುವಂತೆ ಬ್ಯಾಂಕ್ ಗಳನ್ನು ಕೋರಿರುತ್ತಾರೆ. ಎ.ಪಿ.ಎಂ.ಸಿ ಯಾರ್ಡ್‌ನಲ್ಲಿ ತೊಗರಿಬೇಳೆ ಕಚ್ಚಾಮಾಲನ್ನು ಬಹಿರಂಗವಾಗಿ ಚೀಲಗಳಿಂದ ತೆರೆದ ಜಾಗದಲ್ಲಿ ಸುರಿದು ಮಾರಾಟ ಮಾಡಿದಲ್ಲಿ ಖರೀದಿದಾರ ದಾಲ್ ಮಿಲ್ಸ್‌ಗಳಿಗೆ ಉತ್ಪನ್ನದ ಗುಣಮಟ್ಟವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ ಎಂದು ಮನವಿ ಮಾಡಿರುತ್ತಾರೆ. ಸರ್ಕಾರದ ಯೋಜನೆಗಳಾದ ಮಧ್ಯಾಹ್ನದ ಬಿಸಿಯೂಟ ಯೋಜನೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸರ್ಕಾರದ ಏಜೆನ್ಸಿಗಳೊಂದಿಗೆ ಕೆಂಪು ಬೇಳೆ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ವಾರ್ಷಿಕ ವಹಿವಾಟಿನ ಪ್ರಸ್ತುತ ಮಿತಿಯನ್ನು ರೂ.25.00 ಕೋಟಿಗಳಿಂದ ರೂ. 5.00 ಕೋಟಿಗೆ ಕಡಿಮೆಗೊಳಿಸುವಂತೆ ಕೋರಿರುತ್ತಾರೆ.

ಪ್ರಸ್ತುತ ದಾಲ್‌ಮಿಲ್‌ಗಳು ಸರಾಗವಾಗಿ ಕಾರ್ಯನಿರ್ವಹಿಸಲು ದಾಲ್‌ಮಿಲ್‌ಗಳು ಪಡೆದಿರುವ ಬಾಕಿ ಇರುವ ಸಾಲಕ್ಕೆ "ರಿಕವರಿ ಹಾಲಿಡೇ" ಘೋಷಿಸಲು ಹಾಗೂ ಸಾಲ ಸೌಲಭ್ಯಕ್ಕಾಗಿ ಭಾರತೀಯ ರಿಜರ್ವ್ ಬ್ಯಾಂಕ್ "ಆದ್ಯತಾ ವಲಯ" ಎಂದು ಘೋಷಿಸಲು ಮನವಿ ಮಾಡಿರುತ್ತಾರೆ. ಪ್ರಸ್ತುತ ಕೈಗಾರಿಕೆಗಳು ತಾವು ಪಡೆದ ಸಾಲದ ಕಂತುಗಳನ್ನು ಮೂರು ತಿಂಗಳು ಪಾವತಿಸದಿದ್ದಲ್ಲಿ ಆ ಘಟಕವನ್ನು ಭಾರತೀಯ ರಿಜರ್ವ್ ಬ್ಯಾಂಕ್ ಪ್ರಕಾರ ಎನ್.ಪಿ.ಎ ಎಂದು ಘೋಷಿಸಲಾಗುತ್ತದೆ. ಈ ಎನ್.ಪಿ.ಎ ಅವಧಿಯು ಕಡಿಮೆಯಾಗಿದ್ದು ಇದನ್ನು ಹೆಚ್ಚಿಸಲು ಮನವಿ ಮಾಡಿರುತ್ತಾರೆ. ಸದರಿ ಬಹುತೇಕ ಬೇಡಿಕೆಗಳು ಕೇಂದ್ರ ಸರ್ಕಾರ/ಭಾರತೀಯ ರಿಸರ್ವ್ ಬ್ಯಾಂಕಿಗೆ ಸಂಬಂಧಿಸಿರುತ್ತವೆ.

ದಾಲ್‌ಮಿಲ್ ಕೈಗಾರಿಕೋದ್ಯಮಿಗಳ ಸಂಘವು ದಾಲ್‌ಮಿಲ್‌ಗಳಿಗೆ ಅವರು ಬಳಸುವ ಪ್ರತಿ ಯುನಿಟ್ ವಿದ್ಯುತ್‌ಗೆ ರೂ.1.00 ಸಹಾಯಧನ ಸರ್ಕಾರದಿಂದ ನೀಡಲು ಮನವಿ ಮಾಡಿದ್ದು, ಕರ್ನಾಟಕ ಸರ್ಕಾರವು ಹೊಸ ಕೈಗಾರಿಕಾ ನೀತಿ 2020-25 ರಲ್ಲಿ ಹೊಸ/ ವಿಸ್ತರಣೆ/ ಆಧುನೀಕರಣ/ ವೈರುಧ್ಧೀಕರಣ ಕಾರ್ಯಕ್ರಮಡಿಯಲ್ಲಿ ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ದಾಲ್‌ಮಿಲ್‌ಗಳಿಗೆ ಮೂರು ವರ್ಷಗಳ ಕಾಲ ಅವರು ಬಳಸುವ ಪ್ರತಿ ಯುನಿಟ್‌ಗೆ ರೂ.1.00 ವಿದ್ಯುತ್ ಸಹಾಯಧನ ನೀಡಲಾಗುತ್ತಿದೆ.

**ರೋಗಗ್ರಸ್ತ ದಾಲ್‌ಮಿಲ್‌ಗಳ ಪುನಶ್ಚೇತನಕ್ಕೆ ಜರುಗಿಸಲಾದ ಕ್ರಮಗಳು:**

- ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿ ಬ್ಯಾಂಕ್‌ಗಳಿಗೆ ಸಂಬಂಧಿಸಿದ ವಿಷಯಗಳ / ರಿಯಾಯಿತಿಗಳ ಬಗ್ಗೆ ಪರಿಹಾರ/ ರಿಯಾಯಿತಿಗಳನ್ನು ನೀಡುವ ಕುರಿತು ಚರ್ಚಿಸಿದ ತರುವಾಯ ದಾಲ್ ಮಿಲ್‌ಗಳ ಘಟಕಗಳ ಮಾಹಿತಿಯನ್ನು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಗೆ ಸಲ್ಲಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆ ಸಂಖ್ಯೆ RBI vide its circulars No. RPCD.CO.MSME & NFS.BC.40/ 06.02.31/2012-13 dated November 1, 2012 and No. RPCD.MSME & NFS.BC. No.74/06.02.31/2012-13 dated May 9, 2013 ಅನ್ವಯ ಬ್ಯಾಂಕ್‌ಗಳು ರೋಗಗ್ರಸ್ತ ಸಣ್ಣ ಕೈಗಾರಿಕೆಗಳನ್ನು ಪುನಃಶ್ಚೇತನ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಅದರಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ಸಾಲ ಪಡೆದು ಎನ್.ಪಿ.ಎ ಆದ ಘಟಕಗಳ ಪೈಕಿ 10 ಘಟಕಗಳು, ಕೆನರಾ ಬ್ಯಾಂಕ್ ನಿಂದ ಸಾಲ ಪಡೆದು ಎನ್.ಪಿ.ಎ ಆದ 1 ಘಟಕ, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಪಡೆದು ಎನ್.ಪಿ.ಎ ಆದ 1 ಘಟಕ ಒಂದಾವರ್ತಿ ತೀರುವಳಿ ಯೋಜನೆಯ (ಓ.ಟಿ.ಎಸ್.) ಪ್ರಯೋಜನ ಪಡೆದುಕೊಂಡಿರುತ್ತವೆ.
- ಕಚ್ಚಾ ಬೇಳೆ ಕಾಳುಗಳ ಖರೀದಿ ಮಿತಿಯನ್ನು ಪ್ರಸ್ತುತ ಕನಿಷ್ಟ 1000 ಕ್ವಿಂಟಾಲ್‌ಗಳಿಗೆ ನಿಗಧಿಪಡಿಸಿರುವುದಾಗಿ ನಫೆಡ್ ಸಂಸ್ಥೆಯು ತಿಳಿಸಿರುತ್ತದೆ.
- ನೆರೆರಾಜ್ಯಗಳಲ್ಲಿರುವಂತೆ ಎಲ್.ಟಿ ಗರಿಷ್ಠ ಮಿತಿಯನ್ನು 65 ಹೆಚ್.ಪಿ ಬದಲಾಗಿ 99 ಹೆಚ್.ಪಿ ಗೆ ಹೆಚ್ಚಿಸಲಾಗಿದೆ.
- ರೋಗಗ್ರಸ್ತ ದಾಲ್‌ಮಿಲ್‌ಗಳು ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ನೀತಿಯಡಿಯಲ್ಲಿ ಅರ್ಜಿ ಸಲ್ಲಿಸಿದಲ್ಲಿ ಅವುಗಳಿಗೆ ನೀತಿಯ ಪ್ರಕಾರ ಪರಿಹಾರವನ್ನು ನೀಡಲಾಗುವುದು.

ಸಿಐ 77 ಎಸ್‌ಎಸ್‌ಐ 2023

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆಗಳ ಸಚಿವರು